ವಿ. ರಶ್ಮಿ, ಭಾ. ಆ. ಸೇ.
ಸರ್ಕಾರದ ಕಾರ್ಯದರ್ಶಿ
V. RASHMI, I.A.S.
Secretary to Government

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
Karnataka Government Secretariat
Rural Development & Panchayat Raj Department

ಅ.ಸ. ಪತ್ರ ಸಂ.ಗ್ರಾಅಪ 72 ಜಿಪಸ 2013 — ದಿನಾಂಕ 02.05.2013

ಮಾನ್ಯರೆ,

**ವಿಷಯ :** 2013–14ನೇ ಸಾಲಿನಲ್ಲಿ ಹಿಂದುಳಿದ ಪ್ರದೇಶಗಳ ಅನುದಾನ ನಿಧಿ ಯೋಜನೆಯಡಿಯಲ್ಲಿ ವಾರ್ಷಿಕ ಅನುದಾನ ನಿಗದಿಪಡಿಸುವ ಕುರಿತು.

**ಉಲ್ಲೇಖ:**
1. ಭಾರತ ಸರ್ಕಾರದ ಪಂ.ರಾಜ್ ಮಂತ್ರಾಲಯದ ಅ.ಸ.ಪತ್ರ ಸಂ.11019/1447/2012–ಬಿ.ಆರ್.ಜಿ.ಎಫ್, ದಿನಾಂಕ 10.04.2013.
2. ದಿನಾಂಕ 12.03.2013 ರಂದು ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಬಿ.ಆರ್.ಜಿ.ಎಫ್. ಯೋಜನೆಯ ಅನುಷ್ಠಾನ ಪರಾಮರ್ಶೆ ಸಭೆಯ ನಡವಳಿಗಳು.
3. ಸುತ್ತೋಲೆ ಸಂ.ಗ್ರಾಅಪ 50 ಜಿಪಸ 2013, ದಿನಾಂಕ 18.4.2013.

2013–14ನೇ ಸಾಲಿನಲ್ಲಿ ಹಿಂದುಳಿದ ಪ್ರದೇಶಗಳ ಅನುದಾನ ನಿಧಿ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಉಲ್ಲೇಖ (3) ರಲ್ಲಿ ಈಗಾಗಲೇ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ. ಉಲ್ಲೇಖ (1)ರ ಅ.ಸ.ಪತ್ರದಲ್ಲಿ ಬಿ.ಆರ್.ಜಿ.ಎಫ್. ಜಿಲ್ಲೆಗಳಿಗೆ ತಾತ್ಕಾಲಿಕವಾಗಿ ವಾರ್ಷಿಕ ಹಂಚಿಕೆಯನ್ನು ಈ ಕೆಳಕಂಡಂತೆ ನಿಗದಿಪಡಿಸಿದೆ.

(ರೂ. ಕೋಟಿಗಳಲ್ಲಿ)

| ಕ್ರ.ಸಂ. | ಜಿಲ್ಲೆ | ವಾರ್ಷಿಕ ಹಂಚಿಕೆಯಾಗಿರುವ ಅನುದಾನ |
|---|---|---|
| 1. | ಬೀದರ | 22.75 |
| 2. | ಚಿತ್ರದುರ್ಗ | 27.33 |
| 3. | ದಾವಣಗೆರೆ | 24.27 |
| 4. | ಗುಲ್ಬರ್ಗಾ | 31.59 |
| 5. | ರಾಯಚೂರು | 26.36 |
| 6. | ಯಾದಗಿರಿ | 21.11 |
| | **ಒಟ್ಟು** | **153.41** |

ಕೇಂದ್ರ ಸರ್ಕಾರವು ನಿಗದಿಪಡಿಸಿರುವ ವಾರ್ಷಿಕ ಅನುದಾನಕ್ಕೆ ದಿನಾಂಕ 12.03.2013 ರಂದು ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಬಿ.ಆರ್.ಜಿ.ಎಫ್. ಯೋಜನೆಯ ಅನುಷ್ಠಾನ ಪರಾಮರ್ಶೆ ಸಭೆಯ ನಡವಳಿಯಂತೆ ಹಾಗು ಉಲ್ಲೇಖ (4) ರಲ್ಲಿ ಹೊರಡಿಸಿರುವ ಮಾರ್ಗಸೂಚಿಗಳನ್ವಯ 2013–14ನೇ ಸಾಲಿನ ಸಮಗ್ರ ಜಿಲ್ಲಾ ಯೋಜನೆ ಮತ್ತು ಅದನ್ನು ಆಧರಿಸಿ ಬಿ.ಆರ್.ಜಿ.ಎಫ್. ಕ್ರಿಯಾ ಯೋಜನೆಯನ್ನು ತಯಾರಿಸಿ ಕೇಂದ್ರ ಸರ್ಕಾರ ಕೋರಿರುವ ಸ್ಪಷ್ಟೀಕರಣ ಹಾಗು ಹನ್ನೆರಡು ಅಂಶಗಳ ದಾಖಲಾತಿಗಳ ಸಮೇತ ಮೇ, 2013 ರೊಳಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದೆ. ಮುಂದುವರೆದು, ಕ್ರಿಯಾ ಯೋಜನೆಗಳನ್ನು ಪ್ಲಾನ್–ಪ್ಲಸ್ ಹಾಗು ಇತ್ತೀಚಿನ ಪ್ರಗತಿ ವರದಿಯನ್ನು ಆಕ್ಷನ್ ಸಾಫ್ಟ್‌ನಲ್ಲಿ ಕಡ್ಡಾಯವಾಗಿ ಮೇ, 15 ರೊಳಗೆ ಅಳವಡಿಸಲು ಸೂಚಿಸಿದೆ.

..2

3ನೇ ಮಹಡಿ, 3ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001. 3rd Floor, 3rd Stage, M.S. Building, Bangalore-560 001.
Tel. : 2238 4574 2203 2941 Fax : 080-2238 9520 E-mail : secypr-rdpr@karnataka.gov.in / rashmi.venkataraju@gmail.com

ಈ ಅಂಶಗಳನ್ನು ಪಾಲಿಸುವ ನೇರ ಜವಾಬ್ದಾರಿಯನ್ನು ಆಯಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ವಹಿಸಿದೆ.

**ಆದರಗಳೊಡನೆ,**

ಲಗತ್ತು: ಉಲ್ಲೇಖದ ಪತ್ರಗಳು

ತಮ್ಮ ವಿಶ್ವಾಸಿ,

Rashmi V.

**ಶ್ರೀ ಎಸ್.ಎ.ಜಿಲಾನಿ, ಭಾ.ಆ.ಸೇ.,**
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತಿ, ಯಾದಗಿರಿ.